ಜಿಲ್ಲಾಧಿಕಾರಿಗಳ ಕಾರ್ಯಾಲಯ
ಹಾಸನ ಜಿಲ್ಲೆ
ಹಾಸನ, ದಿನಾಂಕ: 24-4-2000

ನಂಬರ್. ಎಲ್‌ಎನ್‌ಡಿ (1) 2:2000-2001

ವಿಷಯ:- ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94-ಸಿ ಗೆ ಬಂದಿರುವ ತಿದ್ದುಪಡಿ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರ ಸಂ. ಆರ್‌ಡಿ 57 ಎಲ್‌ಜಿಪಿ 98 (ಭಾಗ-2) ದಿನಾಂಕ 4-4-2000

## ಸುತ್ತೋಲೆ

ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ವಾಸದ ಮನೆ ನಿರ್ಮಿಸಿಕೊಂಡು ವಾಸವಾಗಿರುವ ಜನರಿಗೆ ಅಂತಹ ಮನೆಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದಲ್ಲಿ ಭೂ ಕಂದಾಯ ಕಾಯಿದೆ 1964ರ ಕಲಂ 94-ಸಿ ಗೆ ತಿದ್ದುಪಡಿ ತರಲಾಗಿದ್ದು, ಸದರಿ ತಿದ್ದುಪಡಿ ನಿಯಮಗಳು ಸರ್ಕಾರದ ಪ್ರಕಟಣೆ ಕ್ರಮಾಂಕ ಆರ್‌ಡಿ 57 ಎಲ್‌ಜಿಪಿ 98 (ಭಾಗ - 2) ದಿನಾಂಕ 25-3-2000 ರಲ್ಲಿ ಪ್ರಕಟಗೊಂಡಿರುತ್ತೆ. ಈ ನಿಯಮಗಳು ಭೂ ಕಂದಾಯ ಅಧಿನಿಯಮ 1964ರ ಕಲಂ 2(18) ರಂತೆ, ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರಲಿದೆ. ಈ ನಿಯಮಾವಳಿಯಂತೆ, ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮನೆ ಕಟ್ಟಿಕೊಂಡು ವಾಸವಾಗಿರುವ ವ್ಯಕ್ತಿಗಳು ಪ್ರಪತ್ರ - 1 ರಲ್ಲಿ ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಬೇಕಾಗಿರುತ್ತೆ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರು ಅರ್ಜಿ ಶುಲ್ಕ 5-00 ರೂ.ಗಳನ್ನು ನಗದಾಗಿ ತಹಶೀಲ್ದಾರರಿಗೆ ಪಾವತಿ ಮಾಡಬೇಕಾಗಿರುತ್ತೆ. ಇತರರು ಅರ್ಜಿ ಶುಲ್ಕ ರೂ.50-00 ನ್ನು ನಗದಾಗಿ ತಹಶೀಲ್ದಾರರಿಗೆ ಪಾವತಿಸಬೇಕಾಗಿರುತ್ತೆ. ಅರ್ಜಿದಾರರು ಅಂತಹ ಮನೆಯನ್ನು ಹೊಂದಲು ಅವರ ವಾರ್ಷಿಕ ಆದಾಯವನ್ನು ಗ್ರಾಮಾಂತರ ಪ್ರದೇಶದವರಿಗೆ ವಾರ್ಷಿಕ 10,000-00 (ಹತ್ತು ಸಾವಿರ) ಮತ್ತು ನಗರ ವಾಸಿಗಳಿಗೆ ವಾರ್ಷಿಕ ಆದಾಯ ರೂ. 12,000-00 (ಹನ್ನೆರಡು ಸಾವಿರ) ಗಳನ್ನು ನಿಗದಿಪಡಿಸಲಾಗಿರುತ್ತೆ. ಈ ನಿಯಮವು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 6 ತಿಂಗಳವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ರೀತಿ ಸ್ವೀಕರಿಸಿದ ಅರ್ಜಿಗಳನ್ನು ಅರ್ಜಿ ಪಡೆದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಇತ್ಯರ್ಥಗೊಳಿಸಬೇಕೆಂದು ನಿಯಮವಿರುತ್ತೆ. ಸದರಿ ನಿಯಮಾವಳಿಯ ರೂಲ್ 7 ರಂತೆ ಅನಧಿಕೃತವಾಗಿ ಮನೆ ಕಟ್ಟಿಕೊಂಡಿರುವ ಅರ್ಹರಿಗೆ ಸಕ್ಷಮಗೊಳಿಸಲು ಈ ಕೆಳಕಂಡ ಅಧಿಕಾರಿಗಳನ್ನು ಸಕ್ಷಮ ಪ್ರಾಧಿಕಾರಿಗಳನ್ನಾಗಿ ಸರ್ಕಾರ ನಿಗದಿಪಡಿಸಿರುತ್ತೆ.

| ಸಕ್ಷಮ ಅಧಿಕಾರಿ | ವ್ಯಾಪ್ತಿ |
|---|---|
| 1. ಜಿಲ್ಲಾಧಿಕಾರಿಗಳು | (ನಗರಸಭೆ ವ್ಯಾಪ್ತಿ) ಮುನಿಸಿಪಲ್ ಕಾರ್ಪೋರೇಷನ್ ಸರಹದ್ದುಗಳು ಮತ್ತು ಅದರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳಲ್ಲಿ ಇರುವ ಎಲ್ಲಾ ಭಾಗಗಳು |
| 2. ಉಪ ವಿಭಾಗಾಧಿಕಾರಿಗಳು | (ಪುರಸಭೆ ವ್ಯಾಪ್ತಿ) ಅವರ ಅಧಿಕಾರ ವ್ಯಾಪ್ತಿ ಒಳಗಿರುವ ಟೌನ್ ಮುನಿಸಿಪಲ್ ಸರಹದ್ದುಗಳು |
| 3. ತಹಶೀಲ್ದಾರರು | (ಇತರೆ ಪ್ರದೇಶ) ಮುನಿಸಿಪಲ್ ಸರಹದ್ದುಗಳ ಹೊರತು, ಅವರ ತಾಲ್ಲೂಕಿನ ಸರಹದ್ದಿನೊಳಗಿರುವ ಸ್ಥಳಗಳು |

ಅನಧಿಕೃತವಾಗಿ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವ ವ್ಯಕ್ತಿಗಳಿಗೆ ಸಕ್ರಮಗೊಳಿಸಲು ವಿಧಿಸಬೇಕಾಗಿರುವ ಶುಲ್ಕ ಅಂತಹ ವಿಸ್ತೀರ್ಣಕ್ಕೆ ಅನುಗುಣವಾಗಿ ಚದರ ಅಡಿ ಒಂದಕ್ಕೆ ನಿಗದಿಪಡಿಸಿರುವ ದರ ಈ ಕೆಳಕಂಡಂತಿರುತ್ತೆ.

| ಸ್ಥಳ | ವ್ಯಾಪ್ತಿ | ವಿಸ್ತೀರ್ಣ | ಚದರಡಿ ಒಂದಕ್ಕೆ ವಿಧಿಸಬೇಕಾದ ದರ (ರೂ.ಗಳಲ್ಲಿ) |
|---|---|---|---|
| ಜಿಲ್ಲಾ ಕೇಂದ್ರ | 5.00 ಕಿ.ಮೀ. ಒಳಗಿನ ನಗರಸಭೆ ವ್ಯಾಪ್ತಿಗೆ | 30:40 | 1-90 |
| | | 40:60 | 4-70 |
| | | 50:80 | 7-00 |
| ಇತರೆ ಸ್ಥಳ (ಪಟ್ಟಣ ಪ್ರದೇಶ) | ಪಟ್ಟಣ ಪ್ರದೇಶ | 30:40 | 1-00 |
| | | 40:60 | 1-90 |
| | | 50:80 | 2-80 |
| ಇತರೆ ಸ್ಥಳ (ಗ್ರಾಮಾಂತರ ಪ್ರದೇಶ) | ಗ್ರಾಮಾಂತರ ಪ್ರದೇಶ | 30:40 | 0-50 |
| | | 40:60 | 1-00 |
| | | 50:80 | 1-40 |

ಮೇಲ್ಕಂಡಂತೆ ಭೂ ಕಂದಾಯ ಕಾಯ್ದೆ 1964ರ ಕಲಂ 94-ಸಿ ಗೆ ಬಂದಿರುವ ತಿದ್ದುಪಡಿ ನಿಯಮಗಳು ಭೂ ಕಂದಾಯ ಕಾಯ್ದೆ 1964ರ ಕಲಂ 2(18) ರಂತೆ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 6 ತಿಂಗಳೊಳಗೆ ನಿಗದಿತ ನಮೂನೆಯಲ್ಲಿ ನಿಗದಿತ ಅರ್ಜಿ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವ ಬಗ್ಗೆ ಸಾರ್ವಜನಿಕರಿಗೆ ಟಾಂ ಟಾಂ ಮೂಲಕ ಪ್ರಚುರಪಡಿಸಿ, ಸದರಿ ನಿಯಮಾವಳಿಯಂತೆ ಅರ್ಜಿ ಪಡೆದ ದಿನಾಂಕದಿಂದ ಒಂದು ವರ್ಷದೊಳಗೆ ಸಕ್ರಮಗೊಳಿಸುವ ಕಾರ್ಯವನ್ನು ನಿಯಮಾನುಸಾರ ಪೂರ್ಣಗೊಳಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ತಹಶೀಲ್ದಾರರು : ಉಪ ವಿಭಾಗಾಧಿಕಾರಿಯವರಿಗೆ ಈ ಮೂಲಕ ಸೂಚನೆ ನೀಡಿರುತ್ತೆ. ಈ ತಿದ್ದುಪಡಿ ನಿಯಮಗಳಲ್ಲಿ ರೂಪಿಸಿರುವ ನಿಯಮಾವಳಿಯಂತೆ, ಭೂ ಕಂದಾಯ ನಿಯಮ 1966ರ ರೂಲ್ 108(ಕೆ) 108(ಎಲ್), 108(ಎಂ), 108(ಎನ್) ನಲ್ಲಿರುವ ನಿಯಮಗಳು ಇದಕ್ಕೂ ಅನ್ವಯಿಸುತ್ತೆ.

(ಕ.ಜಿ.ಆ.ಮೇರೆ)

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ

ನಕಲನ್ನು —

ಜಿಲ್ಲೆಯ ಎಲ್ಲಾ ತಾಲ್ಲೂಕು ತಹಶೀಲ್ದಾರರು : ಉಪ ವಿಭಾಗಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.